ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 2, September-October, 2024, Pp. 1-13
©*IIMRD*, Mysuru
IIMRD JOURNALS
www.iimrd.com

# ಕುವೆಂಪು ನಾಟಕಗಳಲ್ಲಿ ವರ್ಣಸಂಘರ್ಷ: ಇತ್ಯಾತ್ಮಕತೆ

**ಡಾ.ಎಸ್.ಡಿ.ಶಶಿಕಲಾ**
ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

**ಸಾರಾಂಶ: (Abstract)**

*ಕುವೆಂಪು ಅವರು ವರ್ಣಸಂಘರ್ಷವನ್ನು ಕುರಿತ ತಮ್ಮ ಇತ್ಯಾತ್ಮಕ ನಿಲವುಗಳನ್ನು ಹೇಳಲು ಈ ನೆಲದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದ ಪ್ರಸಂಗಗಳನ್ನು ತೆಗೆದುಕೊಳ್ಳುತ್ತಾರೆ. ಭಾರತೀಯ ಸಮುದಾಯ ಒಪ್ಪಿಕೊಂಡ ಮೌಲ್ಯಗಳನ್ನು ಪುನರ್‌ಮೌಲ್ಯೀಕರಣಕ್ಕೆ ಒಳಗು ಮಾಡುವ ಇತ್ಯಾತ್ಮಕ ನಿಲವು ಅವರ ನಾಟಕಗಳಲ್ಲಿದೆ. ಅಂತೆಯೇ ಚಾರಿತ್ರಿಕ ಸಂಗತಿಗಳನ್ನು, ವ್ಯಕ್ತಿಗಳನ್ನು ನಾಟಕಕ್ಕೆ ಬಳಸಿಕೊಂಡಿದ್ದಾರೆ. ಮಾಸ್ತಿಯಂಥ ಹಿರಿಯರ ವಾಗ್ದಂಡನೆಗೂ ಹೆದರದೆ 'ಮಾರ್ನುಡಿ'ಗಳ ಮೂಲಕ ತೀಕ್ಷ್ಣವಾಗಿ ತಮ್ಮ ಪ್ರತಿಕ್ರಿಯೆಗಳನ್ನು ಕೊಡುತ್ತಾ ಹೋಗುವ ದಿಟ್ಟ ನಿಲವನ್ನೂ ತಾಳಿದ್ದಾರೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಕುವೆಂಪು, ವರ್ಣಸಂಘರ್ಷ, ಜಾತಿ ವ್ಯವಸ್ಥೆ, ಇತ್ಯಾತ್ಮಕತೆ, ಶೂದ್ರತಪಸ್ವಿ.

## ಪೀಠಿಕೆ

ಜಾತೀಯತೆ ಎನ್ನುವುದು ಇಡೀ ಭಾರತವನ್ನು ಕಾಡುತ್ತಿರುವ ಜ್ವಲಂತ ಸಮಸ್ಯೆಯಾಗಿದೆ. ಜಾತಿಯ ಸಂಘರ್ಷಗಳು ಇಂದು ಸಮಾಜದ ಸ್ವಾಸ್ಥ್ಯವನ್ನು ಕದಡುತ್ತಿವೆ. ಮಾನವೀಯತೆಯನ್ನು ಮರೆತ ಮನುಷ್ಯನ ಮನೋಧರ್ಮಗಳು ಜಾತಿಶ್ರೇಷ್ಠತೆಯ ವ್ಯಸನದಲ್ಲಿ ಮುಳುಗಿವೆ. ಇದರಿಂದ ಆಗುತ್ತಿರುವ ಮನುಷ್ಯರ – ಮಾನವೀಯತೆಯ ಕಗ್ಗೊಲೆಯನ್ನು, ಮನುಷ್ಯನ ಕ್ರೌರ್ಯವನ್ನು ತಡೆದು ನಿಲ್ಲಿಸುವಂಥ ಉದಾತ್ತವಾದ ಆಲೋಚನೆ – ಚಿಂತನೆಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರು ತಮ್ಮ ನಾಟಕಗಳ ಮೂಲಕ ಕಟ್ಟಿಕೊಡುವ ಜೀವಪರವಾದ ಚಿಂತನೆಗಳೇನು ಎಂಬುದನ್ನು ಅವರ ನಾಟಕಗಳ ಮೂಲಕ ಕಂಡುಕೊಳ್ಳುವ ಅಗತ್ಯ ಮತ್ತು ಅನಿವಾರ್ಯತೆ ನನ್ನನ್ನು ಗಾಢವಾಗಿ ಕಾಡಿದೆ. ಕುವೆಂಪು ಜನ್ಮದಿನಾಚರಣೆಯ ಈ ಹೊತ್ತಿನಲ್ಲಿ ಇಂಥದೊಂದು ವಸ್ತು ವಿಷಯವನ್ನು ಕುರಿತ ಚಿಂತನೆ ಪ್ರಸ್ತುತ ಎಂಬ ತಿಳಿವಳಿಕೆ ನನ್ನದು.

ಭಾರತೀಯ ಸಮಾಜದ ಬೇರುಗಳಲ್ಲಿ ತಳವೂರಿರುವ ನಾಲ್ಕು ಜಾತಿಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ, ಮತ್ತು ಶೂದ್ರ ಜಾತಿಗಳನ್ನು ಕುವೆಂಪು ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಜಾತಿಶ್ರೇಷ್ಠತೆಯ ವ್ಯಸನಗಳನ್ನು ಕುವೆಂಪು ಸಂಘರ್ಷದ ಪರಿಧಿಯಲ್ಲಿ ವಿಶ್ಲೇಷಿಸುತ್ತ ಧರ್ಮ–ಅಧರ್ಮದ ಸ್ವರೂಪ, ಅಧರ್ಮದಿಂದಾದ

*Please cite this article as:* ಶಶಿಕಲಾ ಎಸ್.ಡಿ. (2024). ಕುವೆಂಪು ನಾಟಕಗಳಲ್ಲಿ ವರ್ಣಸಂಘರ್ಷ:ಇತ್ಯಾತ್ಮಕತೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(2). ಪು.ಸಂ.* 1–13

ವರ್ಣಾಶ್ರಮಧರ್ಮದ ಉಲ್ಲಂಘನೆ, ಇದರ ಔಚಿತ್ಯ ಮೊದಲಾದವನ್ನು ಪ್ರಶ್ನಾರ್ಹ ಸಂಗತಿಗಳನ್ನಾಗಿ ನೋಡುತ್ತಾರೆ. ಈ ಮೂಲಕ ಒಂದು ತಾರ್ಕಿಕ ಅಂತ್ಯವನ್ನು ಘೋಷಿಸುವ ನಿರ್ಣಯವನ್ನು ಮಾಡುತ್ತಾರೆ.

**'ಶೂದ್ರತಪಸ್ವಿ'** ನಾಟಕವು ಬ್ರಾಹ್ಮಣನೊಬ್ಬನ ಮಗುವಿನ ಸಾವನ್ನು ಕೇಂದ್ರವನ್ನಾಗಿಸಿಕೊಂಡಿದ್ದು, ಮಗುವಿನ ಸಾವಿನಸುತ್ತ ವರ್ಣಸಂಘರ್ಷದ ವಿಚಾರಗಳು ಆವರಿಸುವುದನ್ನು ಕಾಣುತ್ತೇವೆ. ಶೂದ್ರನಾದ ಶಂಬೂಕ ತಪಸ್ಸು ಮಾಡುತ್ತಿದ್ದುದೇ ತನ್ನ ಮಗನ ಸಾವಿಗೆ ಕಾರಣ ಎಂದು ಭಾವಿಸುವ ಬ್ರಾಹ್ಮಣ ತನ್ನ ಮಗನ ಶವ ಶಂಬೂಕಾಶ್ರಮದಲ್ಲಿದೆ ಎಂದು ಹೆಸರನ್ನೂ ಹೇಳಲು ಹಿಂಜರಿಯುತ್ತಾನೆ. ಹೆಸರನ್ನೂ ಹೇಳಲಾಗದ ಅಸ್ಪೃಶ್ಯತೆಯ ಮನೋಭಾವವನ್ನು ತಳೆಯುತ್ತಾನೆ.

ಶೂದ್ರನ ಹೆಸರು ಹೇಳುವುದೂ ಪಾಪ ಎಂಬ ನಂಬಿಕೆ ಕುರಿತ ವಿವೇಚನೆ ಇಲ್ಲಿಯದು :

**"ರಾಮ : ಪೆಸರಿರ್ಪುದೇನಾ ಬನಕೆ? ಇರ್ಪುದೆತ್ತಣ್ಗೆ?**

**ಬ್ರಾಹ್ಮಣ : ಪಾಪಕರಮೆಂದುಸಿರ್ದೆನಿಲ್ಲಾ ಪೆಸರನ್ ಇರ್ಪುದದು ಮೃತ್ಯುದಿಶೆಯೊಳ್**

**ರಾಮ : ಪೆಸರೊಳೇನ್ ಪಾಪಂ? ಉಸಿರಿಂ.**

**ಬ್ರಾಹ್ಮಣ : ಶಂಬೂಕಾಶ್ರಮವೆಂದು ಕರೆವರಾ ಕಾಡನ್.**

**ರಾಮ : ಓಹೊ ಈಗಳೆನಗೆ ಬೆಳಕು ಮೂಡುತಿದೆ ಮುಂದೆ?**

**ಬ್ರಾಹ್ಮಣ : ಮುಂದೇನ್, ಮಹಾಪ್ರಭೂ? ಕಂಡೆವಿರ್ವರುಮಾ ತಪಂಬಡುತ್ತಿರ್ದನಂ ಶೂದ್ರನಂ, ಶಂಬೂಕವೆಸರಾಂತನಂ ಋಷಿವೇಷದಾ ಆ ಷಾಷಂಡಿಯಂ**

**ರಾಮ : ನಮಸ್ಕಾರಂಗೆಯ್ದಿರೇಂ?**

**ಬ್ರಾಹ್ಮಣ : ಶಿವ ಶಿವ ಶಿವ**

**ಅಂತಪ್ಪ ಘೋರಮಂ ನಾವೆಸಗಿದೆವಲ್ತು**
**ಅರಿಯದಾ ಕುವರಂ ಕೈ ಮುಗಿಯಲಿರ್ದನ್**
**'ಮಾಣ್, ಶೂದ್ರಂಗೆ ತುಳಿಲ್‌ಗೆಯ್ಯಲಾಗ!**
**ಎಂದಾಂ ಬುದ್ಧಿಯಂ ತಿದ್ದಿ ತಡೆದನ್**

. . . . . . . . . . . . . .

**ನಿನ್ನ ರಾಜ್ಯದೊಳಿರ್ದುಮ್**
**ಅನಿತೊಂದನಾದೊಡಂ ಅಧರ್ಮಮಂ**
**ತಡೆಯದಿರೆ ನರಕಮಾಗದೆ ನನಗೆ?**

. . . . . . . . . . . . . .

**ಶೂದ್ರನ್ ತಪಂಗೆಯ್ವೊಂದು ಅಧರ್ಮಕ್ಕೆ**
**ವರ್ಣಾಶ್ರಮ ಧರ್ಮದುಲ್ಲಂಘನೆಯ ಪಾಪಕ್ಕೆ**
**ನಿನ್ನ ಬಾಲ ಪ್ರಜೆಯೊರ್ವನ್ ಬಲಿಯಾದನ್**

**ಆ ಪ್ರಜೆ ಶೂದ್ರನ ತಪೋ ದುಷ್ಕೃತಿಗೆ ಬೇಳ್ವೆಯಾದನ್! "**

ಮಗನ ಸಾವಿಗೆ ಶೂದ್ರನ ತಪಸ್ಸೆಂಬ ದುಷ್ಕೃತಿಯೇ ಕಾರಣವೆಂದು ನಂಬುವ ಬ್ರಾಹ್ಮಣನಿಗೆ ಕ್ಷತ್ರಿಯನಾದ ರಾಮನಿಗೆ ನಮಸ್ಕರಿಸುವಲ್ಲಿ ಜಾತಿ ಶ್ರೇಷ್ಠತೆಯ ವ್ಯಸನ ಕಾಡುವುದಿಲ್ಲ.

**"ಬ್ರಾಹ್ಮಣ : ನೀನ್ ಪಾರ್ವರನ್ ಮೊಗದಿಂದುಗುಳ್ವಾತನಂ**

. . . . . . . . . . .

**ಕಾಲಮನೆ ಕೂಸೆಂಬ ನಿನಗಿಂ ವೃದ್ಧರಿರ್ಪರೆ?**
**ವಿಶ್ವಮಂ ಸೃಜಿಸಿದಾ ಪಿರಿಯಂಗೆ ಪಿರಿಯನ್**
**ನಿನಗೆ ನಾನೆರಗಿದೊಡೆ ವಿಪರೀತನಲ್ತು**
**ಮನುಷ್ಯ ರೀತಿಯಿಂದಪ್ಪೊಡಂ ನಿನಗೆ**
**ಪೊಡವಿಯೊಡೆಯಂಗೆ ಪೊಡೆವಡುವುದೆ ಪಾಳಿ**
**ಪ್ರೇಮ ಸಾಧನದಿಂ ನೀಂ ಮಹಾತಪಸ್ವಿಯಲ್ತೆ?**
**ಪಿರಿದೇಗಳುಂ ತಪಂ. ಗುಣಕ್ಕೆ ಮಚ್ಚರಮೆ?**

ಕ್ಷತ್ರಿಯನಾದ ರಾಮ ಬ್ರಾಹ್ಮಣನಿಗೆ ಮುಖ್ಯವಾಗುವ ಬಗೆ ಇಲ್ಲಿದೆ. ರಾಮನನ್ನು ಮಹಾತಪಸ್ವಿ ಎನ್ನುವುದಲ್ಲದೆ ಗುಣಕ್ಕೆ ಮಚ್ಚರಮೆ? ಎಂದು ವಿನೀತನಾಗಿ ನುಡಿಯುವ ಬ್ರಾಹ್ಮಣನಿಗೆ ಶೂದ್ರತಪಸ್ವಿಯಾದ ಶಂಬೂಕ ವೈದಿಕ ಸಂಪ್ರದಾಯವನ್ನು ಮೀರುವ ಪಾಷಂಡಿಯೆನಿಸುತ್ತಾನೆ.

ಕುವೆಂಪು ಬ್ರಾಹ್ಮಣನೊಬ್ಬನ ಆಂತರ್ಯದಲ್ಲಿ ನೆಲೆಸಿರುವ ಜಾತಿಕುರಿತ ಮೌಢ್ಯ ಮತ್ತು ಈ ಬಗೆಯ ಸಂಘರ್ಷವನ್ನು ಅನಾವರಣಮಾಡುವುದರಲ್ಲಿ ವಿಶ್ರಮಿಸದೆ ಜಾತಿ ಮೌಢ್ಯದ ನಿವಾರಣೆಯ ಬಗ್ಗೆ ಗಮನ ಹರಿಸುತ್ತಾರೆ :

**"ರಾಮ : ಭೂ ಸುರೋತ್ತಮ**
**ಕ್ಷತ್ರಿಯನೊಂದು ಸಂದೇಹಮಂ ನಿವಾರಿಸಿ**
**ಕೃಪೆಗೆಯ್ಯವೇಳ್ಕುಮ್**

. . . . . . . .

**ತಪಂ ಪೂಜ್ಯಕರ್ಮಮಲ್ತೆ, ದ್ವಿಜೇಂದ್ರ?**
**ಬ್ರಾಹ್ಮಣ : ತಪಕ್ಕೆಣೆಯುಂಟೆ, ರಾಘವೇಂದ್ರ**
**ರಾಮ : ತಪಂಗೆಯ್ವನುಂ ಪೂಜ್ಯನಲ್ತೆ ವಿಬುಧವರ್ಯೆ?**
**ಬ್ರಾಹ್ಮಣ : ದಿಟಂ ಧರ್ಮಮೂರ್ತಿ**
**ರಾಮ : ಪೂಜ್ಯಹನನಂ ಪಾಪಕರಮಲ್ತೆ, ಸತ್ವಶೀಲ?**
**ಬ್ರಾಹ್ಮಣ : ನಿಸ್ಸಂಶಯಂ, ವಾಲಿಸಂಹಾರಿ**
**ರಾಮ : ಅಂತೆವೋಲ್ ಈ ತಪಸ್ವಿಯಂ**

**ಕೊಲ್ವುದುಂ ಪಾಪಮಾಗದೆ?**

**ಬ್ರಾಹ್ಮಣ : ವಸಿಷ್ಠ ಶಿಷ್ಯ**

**ತರ್ಕಕೆ ಮಿಗಿಲ್ ಶ್ರುತಿವಾಕ್ಯಮೈಸೆ**

**ತಪಕ್ಕನಧಿಕಾರಿ ಶೂದ್ರನ್**

**ಎಂಬುದು ಶಾಸ್ತ್ರ ಪ್ರಸಿದ್ಧಂ".**

ಬ್ರಾಹ್ಮಣನ ನಿಜವಾದ ಶತ್ರು ಶೂದ್ರನೂ ಅಲ್ಲ, ಅವನ ತಪಸ್ಸೂ ಅಲ್ಲ, ಬ್ರಾಹ್ಮಣನ ಪ್ರಜ್ಞೆಯೇ ಅವನ ಶತ್ರು ಎಂಬುದು ಕುವೆಂಪು ಅವರ ಮನೋಧರ್ಮವಾಗಿದೆ. 'ಅರಸಿಕೊಲ್ ಅರಗುಲಿಯನ್' ಎಂದು ರಾಮಬಿಟ್ಟ ಬ್ರಹ್ಮಾಸ್ತ್ರ ಶಂಬೂಕ ಋಷಿಯನ್ನು ಬಲಗೊಂಡು ಅಡ್ಡ ಬೀಳುತ್ತದೆ. ಆಗ ರಾಮ ನುಡಿಯುತ್ತಾನೆ

**"ರಾಮ : ಋಷಿವರಗೆ ಮರ್ಯಾದೆಯಂ ಸಲಿಸಿ**

**ತದನಂತರಂ, ಬರ್ಪುದಿತ್ತಣ್ಗೆ**

**ಧ್ವಂಸಗೆಯಲ್ಕೆ ತನ್ನ ಹಗೆಯನ್!**

**ಪೂಜ್ಯರನ್ಅವಜ್ಞೆಗೆಯ್ವಾತನನ್;**

**ಶಾಸ್ತ್ರ ಸಂಭ್ರಾಂತಿನನ್, ದುರ್ವಿನೀತನನ್! "**

ಕುವೆಂಪು ಹೇಳ ಹೊರಟಿದ್ದು : ಧ್ವಂಸಗೊಳ್ಳ ಬೇಕಾದದ್ದು ಶಂಬೂಕನ ದೇಹವಲ್ಲ. ಜಾತಿ ಶ್ರೇಷ್ಠತೆಯ ವ್ಯಸನಕ್ಕೆ ಒಳಗಾಗಿ ತೋರುವ ಅವಜ್ಞೆ, ಶಾಸ್ತ್ರ ಸಂಭ್ರಾಂತಿ, ದುರ್ವಿನೀತತೆ. ಹಾಗಾಗಿ "ಸನ್ಮತಿಯ ಸತ್ಕೃತಿಗೆ ಶಾಸ್ತ್ರದ ನೆರಂ ಬೇಕೆ?" ಎನ್ನುವ ಕುವೆಂಪು 'ಬೇಕಾಗಿಲ್ಲ' ಎಂದೇ ಹೇಳುತ್ತಾರೆ.

**"ಬ್ರಾಹ್ಮಣ : ಆರಾದರೇನ್? ಆರಾಧ್ಯರ್ ತಪೋಧನರ್!**

**ನಮಸ್ಕಾರಮೆ ಪುಣ್ಯಂ ! ತಿರಸ್ಕಾರಮೆ ಪಾಪಂ!**

ಜಾತಿಯನ್ನು ಕುರಿತ ಅಂಧಶ್ರದ್ಧೆಗಳು – ಆ ಕುರಿತ ಒಟ್ಟು ಮನೋಧರ್ಮಗಳು ಬದಲಾಗಬೇಕೆಂಬ ಆಶಯ ಇಲ್ಲಿಯದು.

ಜಾತಿಮತಗಳ ಮೌಢ್ಯದಿಂದ ನರಳುತ್ತಿರುವ ಮನಸ್ಸುಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸುವ ಕುವೆಂಪು ಇಂಥ ಅಂಧಾಭಿಮಾನಗಳು ಮನುಷ್ಯ ಸಂಬಂಧಗಳನ್ನು ಛಿದ್ರಗೊಳಿಸಿವೆಯೆಂಬುದನ್ನು ಹೇಳುತ್ತಾರೆ. ವಿದ್ಯೆ, ಪ್ರತಿಭೆ, ಆಯಾ ಕಾಲಘಟ್ಟದ (ವಯಸ್ಸುಗಳ) ಮನೋಧರ್ಮಗಳು ಜಾತಿಯಾಧಾರಿತವಾಗಿ ರೂಪುಗೊಂಡದ್ದಲ್ಲ ಅದು ವ್ಯಕ್ತಿಗತವಾದದ್ದು ಎಂಬುದನ್ನು ಕುವೆಂಪು ನಿರೂಪಿಸುತ್ತಾರೆ. 'ಜಲಗಾರ' ನಾಟಕದಲ್ಲಿ ಜಲಗಾರನ ಹಾಡನ್ನು ಕೇಳಿ ಮೆಚ್ಚಿದ ಬ್ರಾಹ್ಮಣರಿಗೆ ಶೂದ್ರನಾದ ಆತನೇ ಅದನ್ನು ಹಾಡಿದ್ದು ಎಂಬ ಸತ್ಯವನ್ನು ಜೀರ್ಣಿಸಿಕೊಳ್ಳಲಾಗುವುದಿಲ್ಲ. ಹಾಗಾಗಿಯೇ ಎರಡನೆಯ ಪಾರ್ವ ಹೇಳುತ್ತಾನೆ :

**". . . . . ಶೂದ್ರರೊಳ್**

**ಕವಿವರ್ಯರುದಿಸುವರೆ? ಹುಟ್ಟುವರೆ ಪಂಡಿತರ್?**

**ಜನಿಸುವರೆ ಶಿಲ್ಪಿಗಳ್? ಗಾಯಕರ್? ಯೋಗಿಗಳ್?**

**ಅಸದಳಂ"**

ಎಂಬ ಮಾತು ಜಾತಿ ಆಧಾರಿತ ನೆಲೆಯಲ್ಲಿ ಮೂಡುತ್ತದೆ.

ದೇವರನ್ನು ಗುಡಿಯೊಳಗೆ ಅರಸುತ್ತ ಜಾತಿಶ್ರದ್ಧೆಯಲ್ಲಿ ಮುಳುಗಿ ಮಾನವೀಯತೆಯನ್ನು ಮರೆತ ಮಂದಿಗೆ ಕುವೆಂಪು ದೇವರನ್ನು ಕಾಣುವ ಬಗೆಯನ್ನು ತಿಳಿಸಿಕೊಡುತ್ತಾರೆ.

**"ಮೂಡಣದೊಳಿಹನು ಹರಿ**
**ಪಡುವಲೊಳಿಹನು ಅಲ್ಲಾ!**
**ಹೃದಯದೊಳು ನೀ ನೋಡೆ**
**ಸಲೆ ವಿಚಾರವ ಮಾಡೆ**
**ಅಲ್ಲಿರುವನು ಕರೀಮ**
**ಅಲ್ಲೆ ತೋರ್ಪನು ರಾಮ!**
**ಜಗದ ಮನುಜರಿಗೆಲ್ಲಾ**
**ಬ್ರಹ್ಮನಾಗಿಹನಲ್ಲಾ!**
**ಅಲ್ಲ ರಾಮರ ಕಂದನ್**
**ಆಗಿರುವನು ಕಬೀರ!**
**ಆತನೇ ಎನಗೆ ಗುರು**
**ಮೇಣಾತನೇ ಪೀರ"**

ಜಾತಿ ಶ್ರದ್ಧೆಯನ್ನು ಮೀರಿ ದೇವರನ್ನು ಪ್ರಕೃತಿಯಲ್ಲಿ ಕಾಣಬೇಕೆಂದು ಆಶಿಸುತ್ತಾರೆ. 'ಪ್ರಕೃತಿಯಾರಾಧನೆಯೇ ಪರಮನಾರಾಧನೆ' ಎಂಬುದನ್ನು ಮನಗಾಣಿಸುತ್ತಾರೆ. ಜಾತ್ಯಾಂಧತೆಯನ್ನು ಕುವೆಂಪು ಎಷ್ಟು ತೀಕ್ಷ್ಣವಾಗಿ, ನಿರಾಕರಿಸುತ್ತಾರೆಂದರೆ,

**"ಮತದ ಮದ್ಯವ ಕುಡಿದು ತಲೆಗೆಟ್ಟಿಹುದು ಮಂದಿ**
**. . . . . . . . . . .**
**ಮತದ ಮದಿರೆಯನೀಂಬ ಮಂಕು ಬಡಿದಿದೆ ಜನಕೆ**
**. . . . . . . . . . .**
**ಒಂದು ಸಲ ಸರ್ವರೊಳು ಅವನಿರುವನೆನ್ನುವರು**
**'ಹೊಲೆಯ ನೀ ದೂರವಿರು' ಎಂದೆಂಬರಿನ್ನೊಮ್ಮೆ**
**ನುಡಿಗೂ ನೆಗಳ್ತೆಗೂ ಸಂಬಂಧವೇ ಇಲ್ಲ!**
**ಇದೇ ನಮ್ಮ ಭಾರತಾಂಬೆಯ ದುರ್ಗತಿಗೆ ಕಾರಣ"**

ಇಷ್ಟೇ ಅಲ್ಲ, ಆ ದೇವರನ್ನೂ ಅಸ್ಪೃಶ್ಯನನ್ನಾಗಿ ಕಂಡ ಜನ ಸ್ಪೃಶ್ಯನನ್ನಾಗಿ ಮಾಡುವ ಬಗೆಯನ್ನು ಕುವೆಂಪು ವಿಡಂಬಿಸುತ್ತಾರೆ.

**"ಶಿವ : . . . . . ಅಸ್ಪೃಶ್ಯನ್**
**ಆಗಿದ್ದೆ! ಅದರಿಂದ ಹಣೆಗಣ್ಣ ಮುಡಿಸಿದರು**
**ಸುಟ್ಟೆನ್ನ ಶುಚಿಮಾಡಲೆಂದು**
**ಜೋಯಿಸರ ಭಾಗಕ್ಕೆ ಶಿವನು**
**ಮುಖ್ಯದವನಾಗಿಹನು, ಚಂದ್ರನಿಲ್ಲದೆ,**
**ಗಂಗೆ ಇಲ್ಲದೆಯೆ, ಹಣೆಗಣ್ಣು ಹಾವುಗಳು**
**ಇಲ್ಲದೆಯೆ, ಜನಿವಾರ ಬೂದಿಗಳ ಇಲ್ಲದೆಯೆ**
**ಶಿವಗುಡಿಗೆ ಸೇರಿಸರು ಶಿವನಾದ ಎನ್ನ**
**. . . . . . . . . . . . .**
**ಅದಕಾಗಿ ಕಲ್ಪನೆಯ ರೂಪವನು ತೆಗೆದೊಗೆದು ಬಂದಿಹೆನು.**
**ನೋಡಲ್ಲಿ! ಚಂದ್ರನಂ ಬಿಸುಟಿಹೆನು ಗಗನಕ್ಕೆ!**
**ಗಂಗೆಯನ್ನೆಸೆದಿಹೆನು ಹಿಮಗಿರಿಗೆ! ಹಾವುಗಳ**
**ಪಾತಾಳಕಟ್ಟಿಹೆನು! ಹಣೆಗಣ್ಣ ಹಂಚಿಹೆನು ನೇಸರ್ ಅರಿಲ್ಗಳಿಗೆ**
**. . . . . . . .**
**ಶಾಸ್ತ್ರಿಗಳು ಶಿವಗಿತ್ತ ದಾನಗಳು ತೊಲಗೆ,**
**ಉಳಿಯುವನು ಜಗದ ಜಲಗಾರ!"**

ಪುರಾಣದ Mythಗಳನ್ನು ಒಡೆಯುತ್ತಲೇ ಕುವೆಂಪು ಜಗತ್ತಿನ ಜಾತಿ–ಮೌಢ್ಯಗಳ ಕಸಗುಡಿಸುವ ಜಗದ ಜಲಗಾರರಾಗಬೇಕು ನಾವು ಎಂದು ಆಶಿಸುತ್ತಾರೆ.

ಜಾತಿಯ ಕೀಳರಿಮೆಗಳನ್ನು ಗುರುತ್ವದಿಂದ ಹೋಗಲಾಡಿಸುವ, ನಿವಾರಿಸುವ ಹೊಸಮಾರ್ಗವನ್ನು ಕುವೆಂಪು ಕಂಡುಕೊಂಡಿರುವುದು ಅವರ ನಾಟಕಗಳಲ್ಲಿ ಕಂಡುಬರುತ್ತವೆ. 'ಗುರುತ್ವಕ್ಕೆ' ಜಾತಿಭೇದಗಳಿಲ್ಲ ಎಂಬುದನ್ನು ಕುವೆಂಪು ನಿರೂಪಿಸುತ್ತಾರೆ.

ಪರಶುರಾಮನ ಶಿಷ್ಯರಲ್ಲಿ ಒಬ್ಬನಾದ ಬ್ರಹ್ಮಚಾರಿಯ ಮೂಲಕ 'ಕುಲವು ಜನನದೊಳಿಲ್ಲ ಗುಣದೊಳಿಹುದು' ಎಂದು ಹೇಳಿಸುವ ಕುವೆಂಪು 'ಕಾನೀನ' ನಾಟಕದಲ್ಲಿ ಕರ್ಣನಿಗೆ ವಿದ್ಯೆಯನ್ನು ಹೇಳಿಕೊಡಲು ಗುರು ಪರಶುರಾಮನಿಗೆ ಅವನ ಜಾತಿ ಮುಖ್ಯವಾಗುವುದಿಲ್ಲ, ಅವನ ಯೋಗ್ಯತೆ, ಅರ್ಹತೆ, ಗುಣಗಳು ಮುಖ್ಯವಾಗುತ್ತದೆ.

**"ಪರಶುರಾಮ : ಅರಿಗಳ ರುಂಡಗಳೆಂಬ ಮತ್ಸ್ಯಗಳನ್ನು ತನ್ನ ಶರಜಾಲದಲ್ಲಿ ಹಿಡಿಯುವ ಬೆಸ್ತನು!**
**. . . . . . . . . .**
**ವಟುಗಳಿರಾ, ಯಾವಾತನ ಮೊಗದಲ್ಲಿ**

**ತೇಜಸ್ಸು ತೋರುವುದೊ,**

**ಯಾವನೊಳು ಬಾಂದಳದ ಗಾಂಭೀರ್ಯ ಮರೆಯುವುದೊ**

**ಯಾವನು ಸದಾ ಸತ್ಯವಾಡುವನೊ**

**ಅವನೆಲ್ಲಿಯೆ ಇರಲಿ, ಅವನಾರೆ ಆಗಿರಲಿ**

**ಬ್ರಾಹ್ಮಣನು!**

**ಎಲ್ಲಿ ಔದಾರ್ಯವಿರುವುದೊ?**

**ಎಲ್ಲಿ ಸಾಮರ್ಥ್ಯ ಮೈದೋರುವುದೊ? ಮೇಣೆಲ್ಲಿ**

**ವೀರರಸ ಉಕ್ಕುವುದೊ ಅವರೆಲ್ಲ ಕ್ಷತ್ರಿಯರು**

**ರಾಧೇಯ, ನಿನ್ನ ಸಾಮರ್ಥ್ಯಕ್ಕೆ ಮೆಚ್ಚಿದೆನು**

**ನಾನರಿತ ವಿದ್ಯೆಯನು ನಿನಗೆ ಸಂತಸದಿಂದ**

**ಬೋಧಿಸುವೆ.**

**ಸಂಪ್ರದಾಯವು ಯೋಗ್ಯತೆಯ ಮುಂದೆ**

**ಬಹುಕಾಲ ನಿಲ್ಲಲರಿಯದು.**

**ಒಳಗಿಹ ಬೆಳಕು ಹೊಳೆಯತೊಡಗಿದರೆ**

**ಹೊರಗಿರುವ ಕತ್ತಲೆಯು ತಡೆಯಲಾರದು ಅದನು.**

**ನಿನ್ನ ಕಣ್ಣಿನ ಬೆಳಕೆ ನಿನ್ನ ಕುಲವನು ಬಿಚ್ಚಿ**

**ಹೇಳುತಿದೆ. ಮುಂದೆಂದೂ ರಾಧೇಯನೆಂಬುವನು**

**ಪರಶುರಾಮನ ಶಿಷ್ಯ! "**

ಶಾಂತಿಯನ್ನರಸಿ ಗುರುಪರಶುರಾಮನ ದರ್ಶನಕ್ಕೆ ಬಂದ ಭೀಷ್ಮರಿಗೆ ಪರಶುರಾಮ ಕರ್ಣನನ್ನು ಪರಿಚಯಿಸುವ ಬಗೆ.

**"ಪರಶುರಾಮ : ಜಾತಿಯಲಿ ಸೂತಜನು ಗುಣದಲ್ಲಿ ಕ್ಷತ್ರಿಯನು. ಇವನೆನ್ನ ಶಿಷ್ಯ,**

**ರಾಧೇಯನೆಂಬುವನು**

**ಶಸ್ತ್ರ ವಿದ್ಯೆಯೊಳೀತನ್ ಅಪ್ರತಿಮನಾಗಿಹನು".**

ಜಾತಿಯ ತಿಕ್ಕಾಟಗಳಿಗೆ ಕುವೆಂಪು ಮಹಾಭಾರತದ ಹಲವು ಪಾತ್ರಗಳ ಮೂಲಕವೂ ಉತ್ತರಿಸುವ ಕೆಲಸಮಾಡುತ್ತಾರೆ. ಹಸ್ತಿನಾವತಿಯ ಅರಮನೆಯಲ್ಲಿ ನಡೆಯುವ ಕೌರವ ಮತ್ತು ದುಶ್ಯಾಸನರ ಸಂಭಾಷಣೆ ಇದಕ್ಕೆ ಸಾಕ್ಷಿಯನ್ನೊದಗಿಸುತ್ತದೆ.

**"ಕೌರವ : ಅವನು ಸೂತಜನಾದರೇನು, ದುಶ್ಯಾಸನ?,**

**ಕುಂಭ ಸಂಭವನಾದ ಕತದಿಂದ ದ್ರೋಣನೇಂ**

**ಬಿಲ್ಲೋಜನಾಗನೇ?, ನಮಗೆ ಗುರುವಾಗನೇ?,**

**ಆಚಾರ್ಯನಾಗನೇ?, ಬ್ರಾಹ್ಮಣನಾಗನೇ?,**
**ಸೂತನೊಬ್ಬನು ಸಾಕಿ ಸಲಹಿದ ಮಾತ್ರದಿಂ**
**ರಾಧೇಯನ್ ಅಕುಲಜನೆ?,**
**ದುಶ್ಯಾಸನ : ಅಣ್ಣಾ, ನೀನೆಂದ ನುಡಿ ನನ್ನಿ. ನಮಗೇನು?**
**ಯಾರಾದರೇನಂತೆ. ವೀರನಾದರೆ ಸಾಕು**
**ಸೂತನಾಗಲಿ, ಬೆಸ್ತನಾಗಲಿ! ಆತ್ಮಕ್ಕೆ**
**ಸೂತತ್ವಮೆಲ್ಲಿಯದು? ಬೆಸ್ತತನವೆಲ್ಲಿಯದು? ”**

ಗುರುತ್ವದ ಸಮರ್ಥನೆ ಕೂಡಾ ಕುವೆಂಪು ಅವರ 'ಕಾನೀನ' ನಾಟಕದಲ್ಲಿ ಕಾಣಬರುತ್ತದೆ.

**"ದುಶ್ಯಾಸನ : ರಾಧೇಯ, ನೀನವನ ಶಿಷ್ಯನಾದುದು ಹೇಗೆ?**
**ಕೊಡಲಿಗೊರವನು ವಿಲಯದಗ್ನಿಯ ಕಿಡಿಯು**
**ಎಂದು ನಾವೆಲ್ಲ ಕೇಳಿರುವೆವು.**
**ಕರ್ಣ :ಸುಳ್ಳುಮಾತು**
**ಗುರುದೇವನನ್ನರಿಯದಿಹರು ಅಂತು ತಿಳಿಯುವರು.**
**ಸಂಚರಿಸುತ ಅವನೊಡನೆ ಸೇವಿಸಿದರೆ ಆತನನು,**
**ಅವನು ಕರುಣೆಯ ಗಣಿಯು ಎಂದು ಗೊತ್ತಾಗುವುದು.**
**ನನ್ನ ಬಿಲ್ಲೋಜನ್ ಅತಿ ಶಾಂತ ಚಿತ್ತನೆಂದು ಅರಿಯುವುದು."**

ಕರ್ಣನಿಗೆ ಶಾಪಕೊಡುವ ಮೂಲ ಭಾರತದ ಪರಶುರಾಮ ಇಲ್ಲಿ ಆದರಿಸುವ ಪಾತ್ರವಾಗಿ ನಿಜದ ಗುರುತ್ವಕ್ಕೇರುತ್ತಾನೆ. ಜಾತಿ ಕೀಳರಿಮೆಯನ್ನು ಗುರುತ್ವದಿಂದ ಹೋಗಲಾಡಿಸುವ ಬಗೆ 'ಬೆರಳ್‌ಗೆ ಕೊರಳ್' ನಾಟಕದಲ್ಲಿದೆ. 'ಏಕಲವ್ಯ' ಗುರುದ್ರೋಣರನ್ನು ಕುರಿತು ಅಬ್ಬೆಗೆ ಹೇಳುವ ಮಾತು ಹೀಗಿದೆ :

**"ನಾನ್ ಶೂದ್ರನೆಂಬುದನರಿತೊಡಂ**
**ನಮ್ಮನಾ, ಪಾರ್ವರ್ ಶೂದ್ರೆಂದಾಡುವರ್**
**ಪೂಜ್ಯನ್ ತಿರಸ್ಕರಿಸಲಿಲ್ಲ**
. . . . . . . . .
**ಪಾಂಡವರೊಳೊರ್ವನಾ ಬಿಂಕಗುಳಿ ಅರ್ಜುನನ್**
**ನನ್ನ ಬಿಲ್ಲೇಳ್ಗೆಯಂ ಕಂಡು ಕರುಬಿದನ್**
**ಶೂದ್ರನೊಡನೆಮಗೆ ಸಮಚರ್ಯೆ ಸಲ್ಲದೆಂದಾಡಿ**
**ಸೆಡೆತನ್, ಮುನಿದನ್; ಕೀಳವೋಲಾಡಿದನ್**
**ಆಚಾರ್ಯನೆಂದನ್; ಶೂದ್ರನಾದೊಡಮೇನ್?**
**ಸಮರ್ಥನ್, ವಿನಯಶಾಲಿ"**

ಜಾತಿಯ ಗರ್ವಾಂಧತೆಯಲಿ ಮುಳುಗಿರುವ ಭಾರತೀಯ ಸಮುದಾಯವನ್ನು ಎಚ್ಚರಿಸಲು ದಾರ್ಶನಿಕನೊಬ್ಬನ ಅಗತ್ಯವಿದೆ ಎಂಬುದನ್ನು ಅವನ ಉದಯ ಬೆಳಗನ್ನು ಕುವೆಂಪು 'ಮಹಾರಾತ್ರಿ' ನಾಟಕದಲ್ಲಿ ಕಂಡರಸಿದ್ದಾರೆ.

**"ಯಕ್ಷ – ಕಿನ್ನರರ ಸಂವಾದ ಇದಕ್ಕೆ ಸಾಕ್ಷಿಯಾಗಿದೆ.**

**ಯಕ್ಷ : ಶಾಕ್ಯರರಸರ ಪುತ್ರ ಸಿದ್ಧಾರ್ಥನೀ ರಾತ್ರಿ ಬುದ್ಧನಾಗುವನೆಂಬುದೇ ಶುಭದವಾರ್ತೆ!**

**ಗಂಧರ್ವ : ಹಾಗಾದರಿಂದು ಭಾರತಾಂಬೆಯೆ ಧನ್ಯೆ!**

**ಯಕ್ಷ : ಯಜ್ಞಯಾಗಾದಿಗಳ ಹಿಂಸೆಯಲಿ ಬೆಂದು, ಕೃತ್ರಿಮದ ವೈದಿಕರ ದೌಷ್ಟ್ಯದೊಳು ನೊಂದು, ಒಣವೇದ**

**ಪಂಡಿತರ ವಾದದೊಳು ಮುಳುಮುಳುಗಿ ಗೋಳಿಡುವ ಭಾರತಿಯ ಪುಣ್ಯಗಗನದ ಪೂರ್ವದೊಳ್,**

**ನೋಡು, ಹರ್ಷದರುಣೋದಯವು ಶೋಭಿಸುವುದೆಂತು!**

**ಕಿನ್ನರ : ನೋಡದೋ, ಗಂಧರ್ವ, ಭಾರತಾಂಬೆಯು ತನ್ನ ಪರಮಪುಣ್ಯೋದಯಕೆ ಹಿಗ್ಗಿ ಬಿಡುಗಡೆಯ**

**ನಿಟ್ಟುಸಿರ್ ಬಿಟ್ಟು ನಲಿದಿಹಳು.**

**ಯಕ್ಷ : ನೋಡಲ್ಲಿ! ಮುಂದೆ ಬಹ**

**ಬುದ್ಧನಿಗೆ ಕಾಣಿಕೆಯ ತಂದೊಪ್ಪಿಸಲು**

**ಧರ್ಮದೇವತೆಯು ಬಿಳಿಯ ಸೀರೆಯನುಟ್ಟು,**

**ಅರೆಯರಳಿದಂತಿರುವ ಕಣ್ಬೆಳಕ ಬೀರಿ**

**ಸಡಗರದಿಂದ ಬರುತಿಹಳು."**

ಭಾರತದ ಏಳಿಗೆ ಜಾತಿ ಮುಕ್ತ ಸಮಾಜದಲ್ಲಿದೆ ಎಂಬುದನ್ನು ಕುವೆಂಪು ಸಾರುತ್ತಾರೆ.

**ಕುವೆಂಪು ನಾಟಕಗಳಲ್ಲಿನ ಒಟ್ಟು ಇತ್ಯಾತ್ಮಕತೆಯನ್ನು ಹೀಗೆ ಹೇಳಬಹುದು**

**ಪರ್ಯಾಯ ಸಂಸ್ಕೃತಿ**

ವರ್ಣಾಶ್ರಮ ಪದ್ಧತಿಯಿಂದ ನಲುಗುತ್ತಿರುವ ಭಾರತೀಯ ಸಮಾಜಕ್ಕೆ ವರ್ಣಾಶ್ರಮರಹಿತವಾದ ಮಾನವಧರ್ಮದ ಪರ್ಯಾಯ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಅವರ ನಾಟಕಗಳು ಮಹತ್ತ್ವಪೂರ್ಣದ್ದಾಗಿವೆ. ಕುವೆಂಪು ಅವರ ಪಂಚಮಂತ್ರವಾದ 'ಮನುಜಪಥ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ' ಯೆಡೆಗೆ ಅವರ ನಾಟಕಗಳು ತುಡಿಯುತ್ತವೆ. ವಿಶ್ವಾತ್ಮಕ ನೆಲೆಯನ್ನು ಅವರ ನಾಟಕಗಳು ಒಳಗೊಂಡಿವೆ.

**ಪುನರ್ ಮೌಲ್ಯೀಕರಣ**

ಕುವೆಂಪು ಅವರು ವರ್ಣಸಂಘರ್ಷವನ್ನು ಕುರಿತು ತಮ್ಮ ಇತ್ಯಾತ್ಮಕ ನಿಲವುಗಳನ್ನು ಹೇಳಲು ಕುವೆಂಪು ಈ ನೆಲೆದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದ ಪ್ರಸಂಗಗಳನ್ನು ಬಹುತೇಕ

ನಾಟಕಗಳ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಭಾರತೀಯ ಸಮುದಾಯ ಒಪ್ಪಿಕೊಂಡ ಮೌಲ್ಯಗಳನ್ನು ಪುನರ್ ಮೌಲ್ಯೀಕರಣಕ್ಕೆ ಒಳಗುಮಾಡುವ ಇತ್ಯಾತ್ಮಕ ನಿಲವು ಕಾಣುತ್ತದೆ. ನಾನು ಈಗಾಗಲೇ ಪ್ರಸ್ತಾಪಿಸಿರುವ ಶೂದ್ರ ತಪಸ್ವಿಯ ಶಂಬೂಕನ ಪ್ರಸಂಗವಾಗಿರಬಹುದು, ಕಾನೀನ ನಾಟಕದ ಪರಶುರಾಮ ಮತ್ತು ಕರ್ಣರ ಪ್ರಸಂಗವಾಗಿರಬಹುದು, ಬೆರಳ್‌ಗೆಕೊರಳ್‌ನ ಏಕಲವ್ಯನ ಸಂದರ್ಭವಿರಬಹುದು ಇವುಗಳಲ್ಲಿ ನೋಡಬಹುದು.

**ಯುಗಮೌಲ್ಯದ ಮರುಸ್ಥಾಪನೆ :**

***ಪಂಪಯುಗದ ಮೌಲ್ಯದ ಮರುಸ್ಥಾಪನೆ***

'ಕಾನೀನ' ನಾಟಕದ ಬ್ರಹ್ಮಚಾರಿ, ಪರಶುರಾಮ, ದುರ್ಯೋಧನ, ದುಶ್ಯಾಸನರ ಮಾತುಗಳಲ್ಲಿ 'ಕುಲವು ಜನನದೊಳಿಲ್ಲ, ಗುಣದೊಳಿಹುದು', 'ಜಾತಿಯಲಿ ಸೂತಜನು, ಗುಣದಲ್ಲಿ ಕ್ಷತ್ರಿಯನು' ಎಂಬ ಮಾತುಗಳು ಪಂಪಯುಗದ ಮೌಲ್ಯವಾಗಿದೆ. ಪಂಪಭಾರತದಲ್ಲಿ ಕರ್ಣ ದ್ರೋಣರಿಗೆ ಹೇಳುವ ಮಾತು :

**"ಕುಲಂಕುಲಮಲ್ತು ಚಲಂ ಕುಲಂ ಗುಣಂ ಕುಲಂ ಅಭಿಮಾನಕುಲಂ ಅಣ್ಮು ಕುಲಂ"**

ಎಂಬ ಪಂಪನ ಮಾತುಗಳ ಮೌಲ್ಯದ ಮರು ಪ್ರತಿಷ್ಠಾಪನೆ ಕುವೆಂಪು ನಾಟಕಗಳ ಇತ್ಯಾತ್ಮಕ ಗುಣಗಳಲೊಂದಾಗಿದೆ.

**ಕುವೆಂಪು ಕಟ್ಟಿಕೊಡುವ 'ರಾಮರಾಜ್ಯ'ದ ಕಲ್ಪನೆ**

ರಾಮರಾಜ್ಯವೆಂದರೆ ಜಾತಿ, ಮೌಢ್ಯ, ಅಧರ್ಮಗಳಿಂದ ಕೂಡಿದ ರಾಜ್ಯವಲ್ಲ. ಜಾತಿರಹಿತವಾದ, ಅಧರ್ಮರಹಿತವಾದ ಸಮಾನತೆಯ ಆಶಯವುಳ್ಳ ರಾಜ್ಯ. ಕುವೆಂಪು ಇಂಥ ರಾಮರಾಜ್ಯದಲ್ಲಿ ಎಲ್ಲರೂ ಸುಖಿಗಳು ಎನ್ನುತ್ತಾರೆ.

**"ರಾಮ : ರಾಮರಾಜ್ಯದೊಳೆ ಅಧರ್ಮಮೆ ಮೃತ್ಯು. ಅಧರ್ಮ ಸಂಹಾರವೇ ಮೃತ್ಯುವಿಜಯಂ"**

ಅಷ್ಟೇ ಅಲ್ಲ,

**"ಅಖಿಲರ್ಗಂ ಶ್ರೇಯಮಕ್ಕೆ!**

**ರಾಜ್ಯಂ ನಿರ್ವಿಘ್ನಮಕ್ಕೆ! ಋತಂ ಗೆಲ್ಗೆ!"**

ಇಂಥ ರಾಜ್ಯ ನಿರ್ವಿಘ್ನವಾಗಿರಲಿ, ಎಲ್ಲರಿಗೂ ಶ್ರೇಯಸ್ಸನ್ನು ಉಂಟುಮಾಡಲಿ ಎಂದು ಆಶಿಸುತ್ತಾರೆ. ಇದು ಇಲ್ಲಿನ ಇತ್ಯಾತ್ಮಕತೆ.

**ಜಾತ್ಯತೀತ ರಾಷ್ಟ್ರ ನಿರ್ಮಾಣ**

ಜಾತಿ–ಮೌಢ್ಯಗಳಿಂದ ದೂರವಾದ, ಅಹಿಂಸಾಪರವಾದ, ಸಮಾನತೆಯುಳ್ಳ ಮಾನವಧರ್ಮದ ಮೇಲೆ ನಿರ್ಮಿತವಾಗಬೇಕಾದ ಜಾತ್ಯತೀತ ರಾಷ್ಟ್ರ ನಿರ್ಮಾಣ ಕುವೆಂಪು ಅವರ ಬಹುತೇಕ ನಾಟಕಗಳ ಬಹುಮುಖ್ಯವಾದ ಇತ್ಯಾತ್ಮಕ ನಿಲವು. ಅವರ 'ಶ್ಮಶಾನ ಕುರುಕ್ಷೇತ್ರಂ' ನಾಟಕದಲ್ಲಿ ಇದು ಢಾಳಾಗಿ

ಕಾಣುತ್ತದೆ. 'ಶ್ಮಶಾನ ಕುರುಕ್ಷೇತ್ರ'ದ ವಸ್ತು ಅಹಿಂಸೆಯ ಪ್ರತಿಪಾದನೆಯಾಗಿದ್ದಾಗಲೂ ಕುವೆಂಪು ಅವರ ಮನಸ್ಸು 'ಭವ್ಯಭಾರತ'ದ 'ಸ್ವತಂತ್ರ ಭಾರತ'ದ ಕನಸಿನಿಂದ ದೂರ ಉಳಿದಿಲ್ಲ.

'ಶ್ಮಶಾನ ಕುರುಕ್ಷೇತ್ರಂ' ನಾಟಕದ ಮಾತುಗಳು ಹೀಗಿವೆ :

**"ನೋಡದೋ ಭಾರತವರ್ಷಂ. . .**
**ಗೌತಮ ಬುದ್ಧನವನ್, ಮೌಢ್ಯನಿವಾರಕನ್**
**. . . ಕ್ರಿಸ್ತನ್! ದೀನರಕ್ಷಕನ್**
**ಪಿಶಿತ ಆಶಾಕ್ರಾಂತ ಭಾರತವರ್ಷಂ. . .ದಾರಿದ್ರ್ಯಂ**
**. . . . . . . . . . . . .**
**ಸ್ವತಂತ್ರ ಭಾರತರಂಗಂ . . .ಸರ್ವಪ್ರಜಾಧಿಪತ್ಯಂ**
**ಸರ್ವಸಮತ್ವಂ . . . ಜಗತ್‌ಕಲ್ಯಾಣಂ.**
**ದೂರದೊಳ್, ಬಹುದೂರದೊಳ್, ಕಾಲಗರ್ಭದೊಳ್**
**ಸಾಮಾನ್ಯ ಮಾನವ ಸಂಸಾರಂ. . .**
**ಸುಮಧುರಂ. . . ದಿವ್ಯಂ. . .ಸುಶ್ರಾವ್ಯಂ!"**

ಕುವೆಂಪು ಅವರ ದೂರದರ್ಶಿತ್ವದ ಭಾರತ ಇಲ್ಲಿ ಗರಿಗೆದರಿದೆ.

**ಆದರ್ಶ ಗಣರಾಜ್ಯದ ಕಲ್ಪನೆ :**

ಪ್ಲೇಟೋ ತನ್ನ ರಿಪಬ್ಲಿಕ್ ಕೃತಿಯಲ್ಲಿ ಹೇಳುವ ಆದರ್ಶ ಗಣರಾಜ್ಯದ ಇತ್ಯಾತ್ಮಕ ನೋಟವನ್ನು ಕುವೆಂಪು ಅವರ ನಾಟಕಗಳಲ್ಲಿ ನೋಡುತ್ತೇವೆ. 'ಶ್ಮಶಾನ ಕುರುಕ್ಷೇತ್ರಂ' ನಾಟಕ ಒಂದು ನಿಟ್ಟಿನಲ್ಲಿ ಈ ಅಂಶವನ್ನು ದಾಖಲಿಸಿದರೆ, ಅವರ ಕವಿತೆಗಳು ಅದಕ್ಕೆ ಇನ್ನಷ್ಟು ಪುಷ್ಟಿಯನ್ನು ನೀಡುತ್ತವೆ.

**"ನೂರು ದೇವರುಗಳ ನೂಕಾಚೆದೂರ, ಭಾರತಾಂಬೆಯೆ ದೇವಿ ಪೂಜಿಸುವ ಬಾರ"**

ಅಖಂಡ ಭಾರತದ, ಆದರ್ಶದ ಗಣರಾಜ್ಯದ ಇತ್ಯಾತ್ಮಕ ಚಿಂತನೆ ಕುವೆಂಪು ಅವರದು.

**ಬೌದ್ಧ ತತ್ವದೆಡೆಗೆ ಕುವೆಂಪು ನಡಿಗೆ :**

ಬಡತನ, ಮೌಢ್ಯದ ಅಂಧಕಾರದಲ್ಲಿ ಮುಳುಗಿರುವ ಭಾರತೀಯ ಸಮಾಜದ ಏಳಿಗೆ ಬುದ್ಧತತ್ತ್ವದಲ್ಲಿದೆ ಎಂಬುದನ್ನು ಕುವೆಂಪು 'ಮಹಾರಾತ್ರಿ' ನಾಟಕದ ಮೂಲಕ ಹೇಳಿದ್ದಾರೆ.

ಸಿದ್ದಾರ್ಥ ಚನ್ನನಿಗೆ ಹೇಳುವ ಮಾತು :

**"ನಾನೊಬ್ಬ ಸುಖಿಯಾದರೇನಾಯ್ತು? ಲೋಕವೇ ಬೊಬ್ಬಿರಿಯುತಿಹುದಲ್ಲ ಬೆಂದು ಬಡತನದಲ್ಲಿ, ಮೌಢ್ಯಾಂಧಕಾರದೊಳು ಸಿಕ್ಕಿ, ದಾರಿಯ ತಪ್ಪಿ, ಕಾಡು ಪಾಲಾಗಿಹಳು ಭಾರತಾಂಬೆಯು, ಚನ್ನ, ಕಾಡು ಪಾಲಾಗಿಹಳು"**

ಸಿದ್ದಾರ್ಥ ಮಾರನಿಗೆ ಹೇಳುವ ಮಾತು :

**"ಪೊರಮಡುವುದು ಈ ಭೋಗ ಸಾಮ್ರಾಜ್ಯಕಲ್ಲ ಮಾರ, ಮುಕ್ತಿ ಸಾಮ್ರಾಜ್ಯಕ್ಕೆ ಸರ್ವಸೃಷ್ಟಿಯ ಹರ್ಷಕಾಗೆ ಎಳಸುತಿರುವೆ"**

**ಯಕ್ಷ : ಧನ್ಯಂ ಮಹಾರಾತ್ರಿ**

**ಕಿನ್ನರ : ಲೋಕಕಾಗಲಿ ಮೈತ್ರಿ.**

ಮುಕ್ತಿ ಸಾಮ್ರಾಜ್ಯ ಎಂದರೆ ಜಾತಿ–ಮೌಢ್ಯಗಳಿಂದ ಮುಕ್ತವಾದ ಮುಕ್ತಿ ಸಾಮ್ರಾಜ್ಯ. ಅದರ ಸೃಷ್ಟಿಗಾಗಿ ಸಿದ್ದಾರ್ಥ ಬುದ್ಧನಾಗುವ ಬಗೆಯಲ್ಲಿ ಭಾರತಕ್ಕೆ ಇಂಥ ದಾರ್ಶನಿಕನೊಬ್ಬನ ಅಗತ್ಯವನ್ನು ಕುವೆಂಪು ಕಾಣುತ್ತಾರೆ.

ಬುದ್ಧಿಸಂ ಬಗ್ಗೆ ಕುವೆಂಪು ಅವರಿಗೆ ವಿಶೇಷವಾದ ಒಲವಿದೆ. 'ಕಾನೂರು ಹೆಗ್ಗಡಿತಿ' ಕಾದಂಬರಿಯ ಹೂವಯ್ಯ ಮಲೆನಾಡಿನಲ್ಲಿ ತಳವೂರಿದ್ದ ಮೌಢ್ಯವನ್ನು ನಿವಾರಿಸಲು, ಮನುಷ್ಯ ಸಂಬಂಧಗಳನ್ನು ಬೆಸೆಯಲು ಆರಿಸಿಕೊಂಡಿದ್ದು ಬೌದ್ಧತತ್ತ್ವವನ್ನೇ ಎಂಬುದನ್ನು ಇಲ್ಲಿ ನೆನೆಯಬಹುದು.

**ಕುವೆಂಪು ನಾಟಕಗಳ ಚಿಂತನೆ ಬೇರೆ ಅಲ್ಲ ಅವರ ಜೀವನದೃಷ್ಟಿಕೋನ ಬೇರೆ ಅಲ್ಲ :**

'ಕವಿಯ ಜೀವನದೃಷ್ಟಿ ಮತ್ತು ಕಾವ್ಯಸೃಷ್ಟಿ' ಲೇಖನದಲ್ಲಿ ಕುವೆಂಪು ಹೀಗೆ ಬರೆಯುತ್ತಾರೆ:

**"ಸ್ವಾನುಭವ, ದೇಶದ ಸಂಸ್ಕೃತಿ, ಪಡೆದ ವಿದ್ಯೆ, ತಾನು ಹುಟ್ಟಿದ ಮತ್ತು ಬೆಳೆದ ಸುತ್ತಣ ಸನ್ನಿವೇಶ, ಮಹಾಪುರುಷ ಸಂಶ್ರಯ ಮೊದಲಾದವುಗಳ ಪ್ರಭಾವದಿಂದ ಮೂಡುವ ಬುದ್ಧಿಸ್ಥಿತಿಯನ್ನು ಜೀವನದೃಷ್ಟಿ ಎಂದು ಸಂಕೇತಿಸಬಹುದು. ಅಂತಹ ಜೀವನದೃಷ್ಟಿ ರಸಾನುಭೂತಿಗೇರಿದರೆ 'ದರ್ಶನ'ವಾಗುತ್ತದೆ"**

ಹೀಗಾಗಿ ಕುವೆಂಪು ಒಬ್ಬ ದಾರ್ಶನಿಕ. ಕುವೆಂಪು ತಮ್ಮ ಬಗ್ಗೆ ಹೀಗೆ ಹೇಳುತ್ತಾರೆ :

**"ಯಾವ ಮತದವನಲ್ಲ,**
**ಎಲ್ಲ ಮತದವನು**
**ಯಾವ ಪಂಥವು ಇಲ್ಲ,**
**ಬಹು ಪಂಥದವನು**
**ಎಲ್ಲ ಬಿಡುವವನಲ್ಲ,**
**ಎಲ್ಲಹಿಡಿವವನಲ್ಲ**
**ನಾನು ಉಮ್ಮರನಲ್ಲ,**
**ಚಾರ್ವಕನೂ ಅಲ್ಲ;**
**ನೀತಿ ಜಡನೂ ಅಲ್ಲ,**
**ನೀತಿಗೇಡಿಯೂ ಅಲ್ಲ.**
**ಬರಿ ಕನಸಿನವನಲ್ಲ**

**ಬರಿ ಕೆಲಸದವನಲ್ಲ**

**ಎಲ್ಲ ಬಿಡಲೂ ಬಲ್ಲೆ,**

**ಎಲ್ಲ ಹಿಡಿಯಲು ಬಲ್ಲೆ".**

ಕುವೆಂಪು ಅವರು, ಜಾತಿ ಮತ ಧರ್ಮಗಳಾಚೆಗೆ ಮನುಷ್ಯರಾಗಿ ಬದುಕಬಹುದಾದ ಎಲ್ಲ ಬಗೆಯ ಸಾಧ್ಯತೆಗಳನ್ನು ತಮ್ಮ ನಾಟಕಗಳಲ್ಲಿ ಕಾಣಿಸಿದ್ದಾರೆ.

**ಆಕರ ಗ್ರಂಥಗಳು**


- ಕುವೆಂಪು. *ಶೂದ್ರತಪಸ್ವಿ.* ಉದಯರವಿ ಪ್ರಕಾಶನ, ಮೈಸೂರು.
- ಕುವೆಂಪು. *ಕಾನೀನ.* ಉದಯರವಿ ಪ್ರಕಾಶನ, ಮೈಸೂರು.
- ಕುವೆಂಪು. *ಬೆರಳ್‌ಗೆ ಕೊರಳ್.* ಉದಯರವಿ ಪ್ರಕಾಶನ, ಮೈಸೂರು.
- ಕುವೆಂಪು. *ಶ್ಮಶಾನ ಕುರುಕ್ಷೇತ್ರಂ.* ಉದಯರವಿ ಪ್ರಕಾಶನ, ಮೈಸೂರು.
- ಕುವೆಂಪು. *ಮಹಾರಾತ್ರಿ.* ಉದಯರವಿ ಪ್ರಕಾಶನ, ಮೈಸೂರು.